# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 902 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 27.12.2022 |
| ಉತ್ತರಿಸುವ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ತಯಾರಕರು ಹಾಗೂ ಸಹಾಯಕರಿಗೆ ನೀಡುವ ಗೌರವಧನವನ್ನು ಕಳೆದ ಕೆಲ ತಿಂಗಳುಗಳಿಂದ ಪಾವತಿ ಮಾಡದಿರುವುದರಿಂದ ಬಿಸಿಯೂಟದ ಸಿಬ್ಬಂದಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಿಬ್ಬಂದಿಗಳಿಗೆ ಪ್ರತಿ ಮಾಹೆಯ ಗೌರವಧನವನ್ನು ಆಯಾಯ ತಿಂಗಳುಗಳಲ್ಲಿ ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | 2022-23ನೇ ಸಾಲಿನಿಂದ ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಸಂಭಾವನೆಯನ್ನು ಆಧಾರ್ ಆಧಾರಿತ ನೇರ ನಗದು ವರ್ಗಾವಣೆ ತಂತ್ರಾಂಶದ (DBT) ಮೂಲಕ ಸಿಬ್ಬಂದಿಗಳ ಬ್ಯಾಂಕ್ ಖಾತೆ ನೇರವಾಗಿ ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br><br>ಸದರಿ ವ್ಯವಸ್ಥೆಯಡಿ ಅಡುಗೆ ಸಿಬ್ಬಂದಿಯ ಆಧಾರ್ ಸಂಖ್ಯೆಯೊಂದಿಗೆ ಅವರ ವೈಯುಕ್ತಿಕ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ತತ್ಸಂಬಂಧಿತ ವಿವರಗಳನ್ನು ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಆಧಾರ್ ಸಂಖ್ಯೆಗೆ ಜೋಡಣೆ ಮಾಡಬೇಕಾದ ವಿವರಗಳು ಮತ್ತು ಮಾಹಿತಿಗಳಲ್ಲಿ ಲೋಪವಿದ್ದಲ್ಲಿ ಮಾತ್ರ ಅಂತಹಾ ಅಡುಗೆ ಸಿಬ್ಬಂದಿಗಳ ಗೌರವ ಸಂಭಾವನೆ ಪಾವತಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಆದರೆ ಪ್ರಸ್ತುತ ಈ ರೀತಿ ಸಮಸ್ಯೆಗಳು ಕಂಡುಬಂದಲ್ಲಿ ಕೈಗೊಳ್ಳಬೇಕಾಗಿರುವ ಪರಿಹಾರ ಮಾರ್ಗೋಪಾಯಗಳ ಬಗ್ಗೆ ಅಗತ್ಯ ಮಾಹಿತಿ ಮತ್ತು ಸೂಚನೆಗಳನ್ನು ಸಂಬಂಧಿಸಿದ ಬಟವಾಡೆ ಅಧಿಕಾರಿಗಳಿಗೆ ನೀಡಿ ಸಮಸ್ಯೆಗಳನ್ನು ಪರಿಹರಿಸಿಕೊಂಡು ಅಡುಗೆ ಸಿಬ್ಬಂದಿಯವರಿಗೆ ಮಾಸಿಕ ಗೌರವ ಸಂಭಾವನೆಯನ್ನು ಪಾವತಿಸಲು ಕ್ರಮವಹಿಸಲಾಗಿದೆ. ಇಂತಹ ಸಮಸ್ಯೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ರಾಜ್ಯ ಹಂತದಲ್ಲಿಯೂ ಸಹ ಪ್ರತ್ಯೇಕವಾದ ತಾಂತ್ರಿಕ ತಂಡವನ್ನು ನಿಯುಕ್ತಿಗೊಳಿಸಲಾಗಿದೆ. |
| ಆ) | ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ಇವರ ಗೌರವಧನಕ್ಕಾಗಿ ಅಗತ್ಯವಿರುವ ಅನುದಾನ ಎಷ್ಟು; ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಬಿಡುಗಡೆಗೆ ಬಾಕಿಯಿರುವ ಅನುದಾನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಇ) | ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅತ್ಯಂತ ಕಡಿಮೆ ಗೌರವಧನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br><br>ಬಂದಿದ್ದಲ್ಲಿ, ಇವರಿಗೆ ಗೌರವಧನ ಹೆಚ್ಚಳ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಬಂದಿದೆ.<br><br>2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ, 2022-23ನೇ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳ ಗೌರವ ಸಂಭಾವನೆಯನ್ನು ರೂ 1000/- ಗಳಷ್ಟು ಹೆಚ್ಚಿಸಲಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಅಡುಗೆಯವರಿಗೆ |

| | | |
|---|---|---|
| | | ಮಾಸಿಕ ರೂ 3700/- ಗೌರವ ಸಂಭಾವನೆಯನ್ನು ಮತ್ತು ಸಹಾಯಕ ಅಡುಗೆಯವರಿಗೆ ಮಾಸಿಕ ರೂ 3600/- ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ. |

ಇಪಿ 75 ಎಂಎಂಎಸ್ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ
ಸಕಾಲ ಸಚಿವರು.

LAQ - 902

ಅನುಬಂಧ-1

ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳ ಸಂಖ್ಯೆ ಮತ್ತು ಸದರಿ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಪಾವತಿಸಲು ಅಗತ್ಯವಿರುವ, ಬಿಡುಗಡೆ ಮಾಡಿರುವ ಹಾಗೂ ಬಿಡುಗಡೆಗೆ ಬಾಕಿ ಇರುವ ಅನುದಾನಕ್ಕೆ ಸಂಬಂಧಿಸಿದ ಜಿಲ್ಲಾವಾರು ವಿವರ

(ರೂ ಕೋಟಿಗಳಲ್ಲಿ)

| ಕ್ರಸಂ | ಜಿಲ್ಲೆಯ ಹೆಸರು | ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳ ಸಂಖ್ಯೆ | ಸಿಬ್ಬಂದಿಗಳಿಗೆ ಗೌರವಧನ ಪಾವತಿಸಲು ಅಗತ್ಯವಿರುವ ಅನುದಾನ | ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನ | ಬಿಡುಗಡೆಗೆ ಬಾಕಿ ಇರುವ ಅನುದಾನ |
|---|---|---|---|---|---|
| 1 | 2 | 3 | 4 | 5 | 6=4-5 |
| 1 | ಬೆಂಗಳೂರು ನಗರ | 4371 | 16.16 | 14.38 | 1.78 |
| 2 | ಬೆಂಗಳೂರು ಗ್ರಾಮಾಂತರ | 2104 | 7.67 | 6.82 | 0.84 |
| 3 | ಚಿತ್ರದುರ್ಗ | 4355 | 15.92 | 14.17 | 1.75 |
| 4 | ಕೋಲಾರ | 3572 | 13.02 | 11.59 | 1.43 |
| 5 | ಶಿವಮೊಗ್ಗ | 4341 | 15.85 | 14.10 | 1.74 |
| 6 | ತುಮಕೂರು | 6610 | 24.08 | 21.43 | 2.65 |
| 7 | ಮೈಸೂರು | 4917 | 17.98 | 16.00 | 1.98 |
| 8 | ಚಿಕ್ಕಮಗಳೂರು | 2627 | 9.57 | 8.52 | 1.05 |
| 9 | ದಕ್ಷಿಣ ಕನ್ನಡ | 3196 | 11.70 | 10.42 | 1.29 |
| 10 | ಹಾಸನ | 4189 | 15.24 | 13.57 | 1.68 |
| 11 | ಕೊಡಗು | 907 | 3.31 | 2.94 | 0.36 |
| 12 | ಮಂಡ್ಯ | 3504 | 12.78 | 11.37 | 1.41 |
| 13 | ಬೆಳಗಾವಿ | 9596 | 35.25 | 31.37 | 3.88 |
| 14 | ವಿಜಯಪುರ | 5829 | 21.36 | 19.01 | 2.35 |
| 15 | ಧಾರವಾಡ | 2808 | 10.39 | 9.25 | 1.14 |
| 16 | ಉತ್ತರ ಕನ್ನಡ | 4222 | 15.39 | 13.70 | 1.69 |
| 17 | ಕಲಬುರಗಿ | 5695 | 20.88 | 18.58 | 2.30 |
| 18 | ಬಳ್ಳಾರಿ | 2016 | 7.42 | 6.60 | 0.82 |
| 19 | ಬೀದರ್ | 4067 | 14.90 | 13.26 | 1.64 |
| 20 | ರಾಯಚೂರು | 4684 | 17.17 | 15.28 | 1.89 |
| 21 | ಯಾದಗಿರಿ | 2758 | 10.11 | 9.00 | 1.11 |
| 22 | ದಾವಣಗೆರೆ | 3467 | 12.68 | 11.28 | 1.39 |
| 23 | ರಾಮನಗರ | 2322 | 8.46 | 7.53 | 0.93 |
| 24 | ಚಿಕ್ಕಬಳ್ಳಾಪುರ | 2684 | 9.77 | 8.70 | 1.08 |
| 25 | ಚಾಮರಾಜನಗರ | 1902 | 6.95 | 6.19 | 0.76 |
| 26 | ಉಡುಪಿ | 1953 | 7.14 | 6.35 | 0.78 |
| 27 | ಬಾಗಲಕೋಟೆ | 4527 | 16.60 | 14.78 | 1.83 |
| 28 | ಗದಗ | 2332 | 8.56 | 7.61 | 0.94 |
| 29 | ಹಾವೇರಿ | 3850 | 14.11 | 12.56 | 1.55 |
| 30 | ಕೊಪ್ಪಳ | 3141 | 11.52 | 10.25 | 1.27 |
| 31 | ವಿಜಯನಗರ | 3199 | 11.73 | 10.44 | 1.29 |
| | ಒಟ್ಟು | **115745** | **423.66** | **377.06** | **46.60** |